ಮಂಟ್ಪಗೆ ಮನೆಗಳನ್ನು ಕಟ್ಟಿಸಿಕೊಡುವ ಒಂದು ವ್ಯವಸ್ಥೆ ನಡೆಯುತ್ತಾ ಇದೆ. ಆದರೂ ಸಹ ಇದರ ಬಗ್ಗೆ ಏನು ಒಂದು ಸರ್ವೆ ನಡೆಸಿದ್ದಾರೆ ಅದರ ಬಗ್ಗೆ ಡೀಟೇಲ್ ಆಗಿ ಪರಿಶೀಲನೆ ಮಾಡುತ್ತಿದ್ದೇವೆ. ಮಾನ್ಯ ಪಿ. ರಾಮದೇವ್‌ರವರು ಹೇಳಿತಕ್ಕಂಥಾದ್ದು ಇದು ಮೂಲ ಭೂತವಾದ ಪ್ರಶ್ನೆ. ಇದು ಒಂದು ದೊಡ್ಡ ಪ್ರಶ್ನೆ. ಈ ಬಗ್ಗೆ ಒಂದು ಯೋಜನೆಯೂ ಸಹ ಸರ್ಕಾರದ ಮುಂದೆ ಇದೆ. ಈ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ಹಾಗೆ ಏನಾದರೂ ಒಂದು ಮಾಡಬೇಕು ಎನ್ನುವ ಚಿಂತನೆ ಸರ್ಕಾರಕ್ಕೆ ಇದೆ ಎಂದು ಅಷ್ಟು ಮಾತ್ರ ನಾನು ಹೇಳಬಯಸುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಅವರು ಇರತಕ್ಕಂಥ ಮನೆ ಬಹುಶಃ ೧-೧½ ಚದರ ಗಜ ಇರಬಹುದು. ಅವರಿಗೆ ಬಹುಶಃ ೪೦-೪೫ ವರ್ಷದ ಹಿಂದೆ ಅದು ಅಲಾಟ್ ಆಗಿರಬಹುದು. ನನಗೂ ಅಂತಹ ಮನೆ ಸಿಕ್ಕುವುದಿಲ್ಲ. ನಾನು ಇದರ ಬಗ್ಗೆ ಹೇಳುವುದೇನೆಂದರೆ ಈ ಒಂದು ಬೃಹತ್ ಸಮಸ್ಯೆಯನ್ನು ನಿವಾರಿಸಲು ಖಾಸಗಿಯವರಿಗಾದರೂ ಒಂದು ಬೆಂಬಲಕೊಟ್ಟು, ಪ್ರೋತ್ಸಾಹ ಕೊಟ್ಟು ಅವರಿಂದಲಾದರೂ ಈ ಕೆಲಸವಾಗುವ ಹಾಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ಒಳ್ಳೆಯ ಸಲಹೆ.

ಸದಲಗಾ ಪಂಚಾಯಿತಿಯನ್ನು ಪುರಸಭೆಯಾಗಿ ವರ್ಗೀಕರಿಸುವುದು

೪೨೬ (೨೬೨) ಶ್ರೀ ಪಿ. ಪಿ. ಹೆಗಡೆ (ಚಿಕ್ಕೋಡಿ).—ಮಾನ್ಯ ನಗರಾಡಳಿತ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸದಲಗಾ ಪುರಸಭೆ ಪಂಚಾಯಿತಿಯನ್ನು ಎಂದು ಪುರಸಭೆಯಾಗಿ ವರ್ಗೀಕರಿಸಲಾಯಿತು ಮತ್ತು ಅದಕ್ಕೆ ಕಾರಣಗಳೇನು ತಿಳಿಸುವಿರಾ ?

ಆ) ೧೯೬೦-೬೧, ೧೯೬೧-೬೨ ಮತ್ತು ೧೯೬೨-೬೩ನೇ ಸಾಲುಗಳಲ್ಲಿ ಎಲ್ಲಾ ಬಾಬುಗಳಿಂದ ಪುರಸಭೆಯ ಒಟ್ಟು ಆದಾಯ ಎಷ್ಟು ? (ವಿವರಗಳು ಒದಗಿಸಬೇಕಾಗಿ ವಿನಂತಿ)

ಇ) ಆ ಸಾಲುಗಳಲ್ಲಿ ನಿಮ್ನ ಜಾತಿ ಮತ್ತು ನಿಮ್ನ ವರ್ಗದವರ ಕ್ಷೇಮಕ್ಕಾಗಿ ಆಯವ್ಯಯದ ಶೇಕಡಾ ೧೮ರಷ್ಟು ಮೊತ್ತವನ್ನು ವಿಂಗಡಿಸಲಾಗಿದೆಯೇ ?

ಈ) ಖರ್ಚು ಮಾಡಿದ ಒಟ್ಟು ಹಣ

ಉ) ಆ ವರ್ಷಗಳಲ್ಲಿ ಕೆಳಕಂಡ ಬಾಬುಗಳಿಗೆ ಆದ ಖರ್ಚು ಎಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರ ಮಂತ್ರಿಗಳು).—

ಅ) ದಿನಾಂಕ ೧೭-೨-೧೯೬೩ರಂದು ವರ್ಗೀಕರಿಸಲಾಯಿತು. ಪ್ರಜಾ ಸಂಖ್ಯೆ ಮತ್ತು ಸಾರ್ವಜನಿಕರ ಅಭಿಪ್ರಾಯವನ್ನು ಗಮನಿಸಿ ಪುರಸಭೆಯಾಗಿ ಮಾರ್ಪಾಡು ಮಾಡಲಾಗಿತ್ತು.

ಆ) ವಿವರಗಳು ಕೆಳಕಂಡಂತೆ ಇದೆ.

ಬಾಬು	೧೯೬೦-೬೧	೧೯೬೧-೬೨	೧೯೬೨-೬೩
೧. ಆರಂಭದ ಶಿಲ್ಕು	—	೩೫೦೨೨೨-೫೧	೩೨೧೫೪೪-೦೦
೨. ಪುರ ಸಭೆಯ ಕರಗಳು	೬೪೪೭೬-೧೨	೮೭೮೭೩-೮೨	೭೮೯೧೨-೦೦
೩. ಸಂತೆ ಕರ	೪೨೧೧-೦೦	೧೧೯೪-೦೦	೩೮೦೩-೦೦

೧	೨	೩	೪
೪. ಗ್ರಾಂಟುಗಳು :			
(ಅ) ಅಭಿವೃದ್ಧಿ ಗ್ರಾಂಟ್	೧೦೦೦೦೦-೦೦	೫೦೦೦೦-೦೦	೫೦೦೦೦-೦೦
(ಆ) ಎಲ್.ಸಿ.ಹೆಚ್. ಗ್ರಾಂಟ್	೧೦೨೫೦೦-೦೦	೮೫೦೦೦ ೦೦	೨೭೬೦೦-೦೦
(ಇ) ಇತರೆ ಗ್ರಾಂಟುಗಳು	—	೫೨೩೩-೦೦	೯೦೦೦-೦೦
೫. ಮನರಂಜನೆ ಕರ	೩೨೪೬-೦೦	೪೦೯೪-೬೧	೫೦೪೪-೫೦
೬. ಇತರೆ ಉತ್ಪನ್ನ	—	೫೨೩೮೧-೯೪	೯೧೪೧೯-೨೪
ಒಟ್ಟು ವಾರ್ಷಿಕ ಆದಾಯ	೨೭೪೮೩೩-೨೨	೬೧೫೯೯-೪೪	೨೯೪೩೩೬-೭೪

ಇ) ಹೌದು.

ಈ) ೧೯೪೦-೪೧ ರೂ. ೫೧೬-೨೦
೧೯೪೧-೪೨ ರೂ. ೨೯೧-೩೦
೧೯೪೨-೪೩ ರೂ. ೧೫೪೪-೭೫

ಉ)	೧೯೪೦-೪೧	೧೯೪೧-೪೨	೧೯೪೨-೪೩
೧. ಸಿಬ್ಬಂದಿ ಸಂಬಳ	೩೦೪೫೮-೦೦	೭೯೫೪೫-೦೦	೬೯೬೯೦-೦೦
೨. ರಸ್ತೆಗಳ ಸಲುವಾಗಿ	೨೪೪೪-೫೦	೬೯೪೭೬-೦೦	೩೩೦-೦೦
೩. ವಿದ್ಯುತ್ ದೀಪದ ಖರ್ಚು	೯೧೬೩-೩೪	೧೫೯೦೬-೨೦	೨೪೭೧೨-೩೧
೪. ಕುಡಿಯುವ ನೀರಿನ ಖರ್ಚು	೯೦೦೦-೦೦	೨೧೦೦೦-೦೦	೭೭೫೧೫-೭೫
೫. ಇತರೆ ಅಭಿವೃದ್ಧಿ ಕಾಮಗಾರಿಗಳ ಖರ್ಚು	೭೪೬೯-೯೭	೧೬೯೦೬೧-೭೬	೨೦೭೭೪೦-೭೫
ಒಟ್ಟು ಖರ್ಚು	೧೨೬೦೭೫-೨೧	೩೫೪೪೯೪-೯೬	೩೪೪೦೨೪-೪೧

ಶ್ರೀ ಪಿ.ಪಿ. ಹೆಗಡೆ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಬಗ್ಗೆ ಕೊಟ್ಟಿರ ತಕ್ಕಂಥ ಅಂಕಿ ಸಂಖ್ಯೆಗಳನ್ನು ನೋಡಿದರೆ ನನಗೆ ಏನೂ ಅರ್ಥವಾಗುತ್ತಾ ಇಲ್ಲ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಓಪನಿಂಗ್ ಬ್ಯಾಲೆನ್ಸ್ ೧೯೪೧-೪೨ರಲ್ಲಿ ೩,೩೦,೨೨೨.೫೧ ಏನು ಇದರಲ್ಲಿ ಕೊಟ್ಟಿದೆ ನನ್ನ ಒಂದು ಲೆಕ್ಕಾಚಾರದ ಪ್ರಕಾರ ಹೇಳಬೇಕಾದರೆ ಇದು ೧ ಲಕ್ಷ ೪೮ ಸಾವಿರ ೭೪೮ ರೂಪಾಯಿಗಳು ಬರುತ್ತದೆ ಮತ್ತು ಇದರಲ್ಲಿ ಆದರ್ ರಿಸೀಟ್ಸ್ ಎನ್ನುವ ಕಾಲಂ ನೋಡಿದರೆ ೧೯೪೦-೪೧ ನಿಲ್ ಎಂದು ಇದೆ, ೧೯೪೧-೪೨ ರಲ್ಲಿ ೫೨,೩೪೧.೯೪ ತೋರಿಸಿದ್ದಾರೆ. ಹಾಗೆಯೇ ಮುನಿಸಿಪಲ್ ಟ್ಯಾಕ್ಸ್‌ಸ್ ಮತ್ತು ಡೆವೆಲಪ್‌ಮೆಂಟ್ ಗ್ರಾಂಟ್ಸ್ ಮತ್ತು ರಿಸೀಟ್ಸ್, ಫ್ರುಪ್ ಮಾರ್ಕೆಟ್ ಇದರ ಬಗ್ಗೆ ಏನು ತೋರಿಸಿದ್ದಾರೆ ಆದೂ ಸರಿಯಲ್ಲ. ಇದರ ಬಗ್ಗೆ ನನ್ನ ಒಂದು ಲೆಕ್ಕಾಚಾರದ ಪ್ರಕಾರ ೫೨,೭೯೧ ರೂಪಾಯಿಗಳು ಆದರ್ ರಿಸೀಟ್ಸ್‌ನಲ್ಲಿ ಬರುತ್ತದೆ. ಅದನ್ನು ಇದರಲ್ಲಿ ಮೆನ್‌ಷನ್ ಮಾಡಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೊಟ್ಟಿರುವಂಥ ಅಂಕಿ ಸಂಖ್ಯೆಗಳು ಭೋಗಸ್ ಎಂದು ಹೇಳುವುದಲ್ಲದೆ ಈ ಪ್ರಶ್ನೆಯ ಬಗ್ಗೆ ಅವರು ಸರಿಯಾದ ಅಂಕಿಅಂಶಗಳನ್ನು ಕೊಡುವವರಿಗೆ ತಡೆಹಿಡಿಯಬೇಕು. ಇದರ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ತರಿಸಿಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರು ಅವರ ರಸೀಟ್ಸ್ ಬಗ್ಗೆ ಏನೇನು ಕೇಳುತ್ತಿದ್ದಾರೆ ಅದನ್ನು ನಂತರ ತರಿಸಿಕೊಡುತ್ತೇನೆ.

ಶ್ರೀ ಪಿ.ಪಿ. ಹೆಗಡೆ.— ತಾವು ತಪ್ಪು ಉತ್ತರದಲ್ಲಿ ಸ್ಕಾಲರೀಸ್‌ಗೆ ೧೯೮೦–೮೧ರಲ್ಲಿ ೩೦,೪೫೦-೦೦ ೮೧–೮೨ರಲ್ಲಿ ೭೯,೫೪೫ ರೂಪಾಯಿಗಳನ್ನು ೮೨–೮೩ರಲ್ಲಿ ೬೯ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದು ಒಹಳ ಹೆಚ್ಚು ಕಡಿಮೆ ಇದೆ, ಇದು ಸಾಧ್ಯವಿಲ್ಲ. ೮೧–೮೨ರಲ್ಲಿ ೭೯,೫೪೫ ರೂಪಾಯಿಗಳನ್ನು ತಾವು ಕೊಟ್ಟಿದ್ದೇವೆಂದು ಏನು ಹೇಳಿದ್ದೀರಿ ಇದು ೮೨–೮೩ರಲ್ಲಿ ಒಪನಿಂಗ್ ಬ್ಯಾಲೆನ್ಸ್‌ನಲ್ಲಿ ಬರುತ್ತದೆ. ಹೀಗಾಗಿ ಇದನ್ನು ಮಾನ್ಯ ಮಂತ್ರಿಗಳು ಮತ್ತೊಮ್ಮೆ ಪರಿಶೀಲನೆ ಮಾಡಿಸಿದರೆ ಚೆನ್ನಾಗಿರುತ್ತಿತ್ತು. ಆಮೇಲೆ ಎಕ್ಸ್‌ಪೆನ್ಸ್ ಆನ್ ರೋಡ್ಸ್ ಇದನ್ನು ಎಲ್ಲಿ ಮಾಡಿದ್ದಾರೋ ಏನು ಮಾಡಿದ್ದಾರೋ ಗೊತ್ತಿಲ್ಲ, ಗ್ರಾಂಟ್ ಕೊಟ್ಟನಂತರ ಏನೋ ಸ್ವಲ್ಪ ಕೆಲಸ ಮಾಡಿದರು, ಲೈಟ್ಸ್, ಎರಡು ಸಾವಿರ ಇರುವ ಹರಿಜನರ ಕೇರಿಗೆ ಲೈಟನ್ನು ಕೊಡಬೇಕು, ಇದು ಎಲ್ಲಿದೆಯೋ ಏನೋ, ಲೈಟ್ಸ್ ಕೊಟ್ಟಿದ್ದೇವೆಂದು ತೋರಿಸಿದ್ದಾರೆ. ಕುಡಿಯುವ ನೀರಿಗೆ ಇಷ್ಟು ಹಣವನ್ನು ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ ಆದರೆ ಅಲ್ಲಿ ಕುಡಿಯುವ ನೀರು ಇಲ್ಲ. ಬರಗಾಲದ ಕಾಮಗಾರಿಗಳಲ್ಲಿ ಮೂರು ನಾಲ್ಕು ಕಡೆ ಏನು ಕೆಲಸ ಮಾಡಿದರೋ ಅಷ್ಟೆ. ಅದರ್ ಡೆವೆಲಪ್‌ಮೆಂಟ್ ವರ್ಕ್ಸ್. ಇದರ ಬಗ್ಗೆ ದೊಡ್ಡ ಸಂಖ್ಯೆಯನ್ನು ತೋರಿಸಿದ್ದಾರೆ. ೮೧–೮೨ರಲ್ಲಿ ೧.೬೯ಲಕ್ಷ ರೂಪಾಯಿಗಳು ೮೨–೮೩ರಲ್ಲಿ ೨ ಲಕ್ಷ ರೂಪಾಯಿಗಳನ್ನು ತೋರಿಸಲಾಗಿದೆ. ಈ ಹಣದಿಂದ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೀರಿ ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಎಲ್ಲಾ ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನನ್ನ ದೃಷ್ಟಿಯಲ್ಲಿ ಅಧ್ಯಕ್ಷರು ಇದನ್ನು ಹೆಲ್ಪ್ ಒಫರ್ ಮಾಡಿದರೆ ಒಳ್ಳೆಯದು.

ಸೇಡಂ ತಾಲ್ಲೂಕಿನಲ್ಲಿರುವ ಸಹಕಾರ ಸಂಘಗಳ ಕಾರ್ಯಗಳ ಬಗ್ಗೆ

೪೨೭ (೨೫೩) ಡಾ|| ನಾಗರೆಡ್ಡಿ ಲಚಮಾ ರೆಡ್ಡಿ (ಸೇಡಂ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸೇಡಂ ತಾಲ್ಲೂಕಿನಲ್ಲಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಎಷ್ಟು ಸಹಕಾರ ಸಂಘಗಳು ಕಾರ್ಯ ರೂಪದಲ್ಲಿವೆ ಮತ್ತು ಎಷ್ಟು ಸಹಕಾರ ಸಂಘಗಳು ಮುಚ್ಚಿವೆ ?

ಇ) ಈ ಸಹಕಾರ ಸಂಘಗಳು ಕಾರ್ಯರೂಪದಲ್ಲಿರದಿರಲು ಕಾರಣಗಳೇನು ?

ಈ) ಇವುಗಳ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—

ಅ) ಸೇಡಂ ತಾಲ್ಲೂಕಿನಲ್ಲಿ ಒಟ್ಟು ೬೭ ಸಹಕಾರ ಸಂಘಗಳಿವೆ.

ಆ) ಕಾರ್ಯರೂಪದಲ್ಲಿರುವ ಸಹಕಾರ ಸಂಘಗಳು ೩೧ ಕಾರ್ಯ ಸ್ಥಗಿತಗೊಂಡಿರುವ ಸಹಕಾರ ಸಂಘಗಳು–೬ ಸಮಾಪನೆಗೆ (ಲಿಕ್ವಿಡೇಷನ್) ಒಳಪಡಿಸಿರುವ ಸಹಕಾರ ಸಂಘಗಳು–೩೦

ಇ) ಸ್ಥಗಿತವಾಗಿರುವ ೬ ಸಂಘಗಳು ಆರ್ಥಿಕವಾಗಿ ಬಲಹೀನವಾಗಿರುವುದು ಮತ್ತು ಇವುಗಳ ಸದಸ್ಯರುಗಳು ಸಂಘದ ಪುನಶ್ಚೇತನದ ಬಗ್ಗೆ ಆಸಕ್ತರಾಗಿರುವುದೇ ಮುಖ್ಯ ಕಾರಣ.

ಈ) (೧) ಸರ್ಕಾರವು ಸಹಕಾರಿ ಇಲಾಖೆ ಅಧಿಕಾರಿಗಳ ಮೂಲಕ ತಾಂತ್ರಿಕ ಸಲಹೆ ಕೊಡುತ್ತದೆ.

(೨) ಮಾರ್ಚಿನ ಸಹಾಯಧನ ಮತ್ತು ನೌಕರರನ್ನು ನೇಮಿಸಿಕೊಳ್ಳಲು ಸಹಾಯಧನವನ್ನು ಅರ್ಹತೆಯುಳ್ಳ ಸಂಸ್ಥೆಗಳಿಗೆ ಸಹಾಯಧನದ ಮೂಲಕ ಕೊಡಲಾಗುತ್ತಿದೆ.

ಈ ರೀತಿ ಸಹಾಯಗಳನ್ನು ಉಪಯೋಗಿಸಿಕೊಂಡು ಸಹಕಾರಿ ಸಂಘಗಳನ್ನು ಸರಿಯಾಗಿ ನಡೆಸುವ ಜವಾಬ್ದಾರಿ ಸಂಘಗಳ ಸದಸ್ಯರದು.